ಶ್ರೀ ಬಿ. ಸೋಮಶೇಖರ್ :- ತಾವು ನಾಳೆ ಏನು ತೀರ್ಮಾನ ತೆಗೆದುಕೊಳ್ಳುತ್ತೀರಿ ಅದನ್ನು ನಾಳೆ ಅನೌನ್ಸ್ ಮಾಡಬಹುದು.

ಉಪಾಧ್ಯಕ್ಷರು :- ಈಗ ಒಂದು ಸಣ್ಣ ಬಿಲ್ ಅನ್ನು ಇಂಟ್ರಡ್ಯೂಸ್ ಮಾಡೋಣ.

ಶ್ರೀ ಹಂಪನಗೌಡ ಬಾದರ್ಲಿ :- ನಾವು ಒಂದು ವರ್ಷದಲ್ಲಿ ಈ ಸದನದಲ್ಲಿ ಮಾತನಾಡುವ ಅವಕಾಶ ನಮಗೆ ಸಿಕ್ಕಿಲ್ಲ. ಇಂಥ ಸಂದರ್ಭದಲ್ಲೂ ನೀವು ಅವಕಾಶ ಕೊಡಲಿಲ್ಲವೆಂದರೆ ಏನರ್ಥ?

ಉಪಾಧ್ಯಕ್ಷರು :- ಇಲ್ಲ ಚರ್ಚೆ ಮಾಡುವಂಥದ್ದು ಏನೂ ಇಲ್ಲ. ಕರ್ನಾಟ ಗೃಹ ರಕ್ಷಾ ದಳದ ಬಗ್ಗೆ ಮಾನ್ಯ ಮಂತ್ರಿಗಳು ತಯಾರಾಗಿ ಬಂದಿದ್ದು ಮೂರು ದಿವಸದಿಂದ ಪಾಸ್ ಮಾಡಿಕೊಡಿ ಎಂದು ಕೇಳುತ್ತಿದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ :- ಮಾನ್ಯ ಹಂಪನಗೌಡರವರು ಸಿಇಟಿ ಮೇಲೆ ಐದು ನಿಮಿಷ ಮಾತನಾಡುತ್ತಾರಂತೆ ಅವರಿಗೆ ದಯಮಾಡಿ ಅವಕಾಶ ಮಾಡಿಕೊಡಿ.

ಉಪಾಧ್ಯಕ್ಷರು :- ನಾಳೆ ಇದರ ಮೇಲೆ ಅವರು ಉತ್ತರ ಕೊಟ್ಟ ನಂತರ ಕ್ಲಾರಿಫಿಕೇಷನ್ ಕೇಳಲಿ.

ಶ್ರೀ ಪಿ.ಜಿ.ಆರ್. ಸಿಂಧ್ಯ :- ಅವರು ಯಾವತ್ತೂ ಮಾತನಾಡಿಲ್ಲ. ದಯಮಾಡಿ ಅವರಿಗೆ ಅವಕಾಶ ಮಾಡಿಕೊಡಿ.

ಉಪಾಧ್ಯಕ್ಷರು :- ನಾಳೆ ಬೇಕಾದರೆ ಮಾತನಾಡಲಿ.

ಶ್ರೀ ಹಂಪನಗೌಡ ಬಾದರ್ಲಿ :- ತಾವು ಹೇಳಿದಂತೆ ನಾಳೆ ಮಾತನಾಡುತ್ತೇನೆ.

ಉಪಾಧ್ಯಕ್ಷರು :- ಈಗ ವಿಧೇಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು, ಮೊದಲನೆಯದಾಗಿ, ಕರ್ನಾಟಕ ಗೃಹ ರಕ್ಷಕದಳ (ತಿದ್ದುಪಡಿ) ವಿಧೇಯಕ, 2003.

ಶ್ರೀ ಪಿ.ಜಿ.ಆರ್. ಸಿಂಧ್ಯ :- ಅದರ ಬಗ್ಗೆ ಸ್ವಲ್ಪ ಚರ್ಚೆ ಮಾಡಬೇಕಾಗಿದೆ. ಅದೇನೋ ಮಂತ್ರಿಗೆ ಇರುವ ಪವರ್ಸ್ ಕಿತ್ತು ಹಾಕುವುದಕ್ಕೆ ಮಾಡಿರುವುದು ಅದ್ದರಿಂದ ಅದನ್ನು ಚರ್ಚಿಸಬೇಕಾಗಿದೆ. ಅದನ್ನು ವಾಪಸ್ ತೆಗಿಸಬೇಕಾಗುತ್ತದೆ, ಆದ್ದರಿಂದ ದಯಮಾಡಿ ಅದನ್ನು ಮಾಡುವುದು ಬೇಡ, ಹಂಪನಗೌಡರವರಿಗೆ ಅವಕಾಶ ಕೊಡಿ ಅವರು ಮಾತನಾಡಲಿ.

ಉಪಾಧ್ಯಕ್ಷರು :- ಹಾಗಾದರೆ ಇವತ್ತಿಗೆ ಯಾವುದು ಬೇಡವೆ? ಹಾಗಾದರೆ ಒಂದು ಪ್ರಕಟಣೆ ಇದೆ.

6. ಪ್ರಕಟಣೆ

ಉಪಾಧ್ಯಕ್ಷರು :- ಈ ದಿನ ಅಂದರೆ, ದಿನಾಂಕ 11ನೇ ಮಾರ್ಚ್, 2003ರಂದು ನಡೆದ ವಿಧಾನಸಭೆಯ ಕಾರ್ಯಕಲಾಪಗಳ ಸಲಹಾ ಸಮಿತಿಯ ಸಭೆಯಲ್ಲಿ ವಿಧಾನಸಭೆಯ ಕಾರ್ಯಕಲಾಪಗಳನ್ನು ಈ ಕೆಳಕಂಡಂತೆ ನಡೆಸಲಾಗುವುದೆಂದು ತೀರ್ಮಾನಿಸಲಾಯಿತು.

1. ದಿನಾಂಕ 19ನೇ ಮಾರ್ಚ್ 2003ರ ಬುಧವಾರದಂದು ಸಂಜೆ 4.00 ಘಂಟೆಗೆ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ಮೇಲೆ ಚರ್ಚೆ ಮುಕ್ತಾಯಗೊಂಡು ಸರ್ಕಾರದಿಂದ ಉತ್ತರ.

2. ದಿನಾಂಕ 21ನೇ ಮಾರ್ಚ್, 2003ರ ಶುಕ್ರವಾರದಂದು, ರಾಜ್ಯದ ಆಯವ್ಯಯದ ಮಂಡನೆ.
3. ಪ್ರತಿದಿನ ಮಧ್ಯಾಹ್ನ 1.30 ರಿಂದ 2.30 ಘಂಟೆಯವರೆಗೆ ಊಟದ ವಿರಾಮ.
4. ಈ ಹಿಂದೆ ತೀರ್ಮಾನಿಸಿದಂತೆ ಪ್ರತಿದಿನ ವಿರಾಮದ ನಂತರ ಒಂದು ಅಥವಾ ಎರಡು ವಿಧೇಯಕಗಳನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳಲಾಗುವುದು.
5. ದಿನಾಂಕ 24.03.2003 ರಿಂದ 31.03.2003 ರವರೆಗೆ ಸರ್ಕಾರಿ ಕಾರ್ಯಕಲಾಪಗಳು.
6. ಸದನದ ಕಾರ್ಯಕಲಾಪಗಳನ್ನು ಪ್ರತಿದಿನ ಸಾಯಂಕಾಲ 6.30 ಘಂಟೆಯವರೆಗೆ ನಡೆಸಲಾಗುವುದು.

ಸದನವು ಇದ್ದಕೆ ಒಪ್ಪಿಗೆ ನೀಡಿದೆಯೆಂದು ಭಾವಿಸುತ್ತೇನೆ.

ಈಗ ಸದನವನ್ನು ನಾಳೆ ಬೆಳಿಗ್ಗೆ 11ರವರೆಗೆ ಮುಂದೂಡುತ್ತಿದ್ದೇನೆ.

(ಸದನವು ಸಂಜೆ 6 ಗಂಟೆ 30 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ದಿನಾಂಕ 12ನೇ ಮಾರ್ಚ್ 2003ರ ಬುಧವಾರ ಬೆಳಿಗ್ಗೆ 11 ಗಂಟೆಗೆ ಸೇರಲು ನಿಶ್ಚಯಿಸಿತು)

+(ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)

7. ಅನುಬಂಧ - I

ಹಳೆಯಂಗಡಿ ಕದಿಕೆಯಿಂದ ಸಸಿಹಿತ್ಲು ಕಾಲು ಸೇತುವೆ ನಿರ್ಮಾಣ

731(105) ಶ್ರೀ ಅಭಯಚಂದ್ರ ಕೆ. (ಮೂಡಬಿದ್ರೆ) ಮಾನ್ಯ ಮೀನುಗಾರಿಕೆ ಹಾಗೂ ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹಳೆಯಂಗಡಿಯಿಂದ ಸಸಿಹಿತ್ಲುಗೆ ಮೀನಿಗಾರಿಕಾ ವ್ಯವಹಾರ ಸುಗಮವಾಗಿ ನಡೆಯಲು ನಂದಿನಿ ನದಿಗೆ ಕಾಲು ಸೇತುವೆ ನಿರ್ಮಾಣ ಮಾಡಲು ಮನವಿಯೇನಾದರೂ ಸರಕಾರಕ್ಕೆ ಬಂದಿದೆಯೇ?

ಆ) ಕಾಲು ಸೇತುವೆ ಇಲ್ಲದೆ ದೋಣಿಯಲ್ಲಿ ಜನರು ನದಿ ದಾಟುವುದರಿಂದ ಆಗುವ ತೊಂದರೆಗಳು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಈ ಕಾಲು ಸೇತುವೆ ನಿರ್ಮಿಸಲು ಬೇಕಾಗುವ ಅಂದಾಜು ವೆಚ್ಚವೆಷ್ಟು?

ಈ) ಸರಕಾರವು ಪ್ರಸಕ್ತ ಸಾಲಿನಲ್ಲಿ ಈ ಕಾಲು ಸೇತುವೆ ನಿರ್ಮಾಣ ಯೋಜನೆಗೆ ಮಂಜೂರಾತಿ ನೀಡುವುದೇ?

ಶ್ರೀ ವಸಂತ ವಿ. ಸಾಲಿಯಾನ (ಮೀನುಗಾರಿಕೆ ಹಾಗೂ ಬಂದರು ರಾಜ್ಯ ಸಚಿವರು)

ಅ) ಹೌದು, ಹಳೆಯಂಗಡಿಯ ಕಡಿಕೆಯಿಂದ ಸಸಿಹಿತ್ಲುಗೆ ಕಾಲು ಸೇತುವೆ ನಿರ್ಮಾಣ ಮಾಡಲು ಬೇಡಿಕೆ ಬಂದಿದೆ.

ಆ) ಬಂದಿದೆ.

ಇ) ಈ ಕಾಲು ಸೇತುವೆ ಕಾಮಗಾರಿಯ ಅಂದಾಜು ವೆಚ್ಚ ರೂ. 20.00 ಲಕ್ಷ.

ಈ) ಈ ಕಾಮಗಾರಿ ಬಗ್ಗೆ ಸರ್ಕಾರ ಸಾರ್ವಜನಿಕ ಹಿತದೃಷ್ಟಿಯಿಂದ ಮರುಪರಿಶೀಲನೆ ನಡೆಸಿ ವಾಹನ ಸಂಚಾರದ ಸೇತುವೆ ನಿರ್ಮಾಣವನ್ನು ರೂ. 90.00 ಲಕ್ಷ ಅಂದಾಜು ವೆಚ್ಚದಲ್ಲಿ